ಪ್ರತಿಬಿಂಬ

**PRATIBIMBA – Multidisciplinary Kannada Research Journal of IIMRD**
**ISSN: 2582-2284**
**Vol-1 Issue 6, May-Jun 2020, 86-88**
**©*IIMRD*, Mysuru**

IIMRD JOURNALS

**www.iimrd.com**

# ಶತಮಾನ ಪೂರೈಸಿದ ಅಂತರಾಷ್ಟ್ರೀಯ ಕಾರ್ಮಿಕ ಸಂಘ ಮತ್ತು ಆಧುನಿಕ ಶತಮಾನದ ಕಾರ್ಮಿಕರ ಸಮಸ್ಯೆಗಳು

**ಡಾ. ಜಿ.ಎಸ್. ಚಿಣಗಿ***

**ಪೀಠಿಕೆ**

ಪ್ರಸ್ತುತ ಅರ್ಥವ್ಯವಸ್ಥೆಯಲ್ಲಿ 3.5 ಶತಕೋಟಿಯಷ್ಟು ಜನರು ಕಾರ್ಮಿಕ ವರ್ಗಕ್ಕೆ ಸೇರಿದವರಾಗಿದ್ದು, ಉತ್ಪಾದನಾ ಕ್ಷೇತ್ರದಲ್ಲಿ ಇವರ ಪಾತ್ರ ಅತ್ಯಂತ ಪ್ರಮುಖವಾದುದಾಗಿದೆ. ಇಂತಹ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಲು ಹಾಗು ಅವರ ಹಿತಾಸಕ್ತಿಯನ್ನು ಕಾಪಾಡಲು ಜಾಗತಿಕ ಮಟ್ಟದಲ್ಲಿ ಅನೇಕ ರಾಷ್ಟ್ರಗಳ ಸಹಕಾರದಿಂದ 1905ರಲ್ಲಿ ಸ್ವಿಟ್ಜರ್ಲ್ಯಾಂಡಿನ ಬಾಸೆಲ್‌ನಲ್ಲಿ ಕಾರ್ಮಿಕ ಸಂಘ ರಚನೆಯಾಯಿತು. ಇದೇ ಅಡಿಪಾಯದೊಂದಿಗೆ ವರ್ಸೇಲ್ಸ್‌ನಲ್ಲಿ 1919ರ ಜನವರಿ 31ರಲ್ಲಿ ಅಂತರಾಷ್ಟ್ರೀಯ ಕಾರ್ಮಿಕ ಸಂಘ ಸ್ಥಾಪನೆಯಾಯಿತು. ಇದರ ಕೇಂದ್ರ ಕಛೇರಿ ಸ್ವಿಟ್ಜರ್ಲ್ಯಾಂಡಿನ ಜಿನೇವಾದಲ್ಲಿದೆ. 1945 ರವರೆಗೂ ಲೀಗ್ ಆಫ್ ನೇಷನ್ಸ್‌ನೊಂದಿಗೆ, ನಂತರ 1946ರಲ್ಲಿ ವಿಶ್ವಸಂಸ್ಥೆಯ ಒಂದು ಅಂಗಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. ಐ.ಎಲ್.ಓ. (ಇಂಟರ್‌ನ್ಯಾಷನಲ್ ಲೇಬರ್ ಆರ್ಗನೈಜೇಶನ್) ಸ್ಥಾಪನೆಗೊಂಡು ಶತಮಾನ ಪೂರೈಸಿರುವ ಸಂಘದ ಬೆಳವಣಿಗೆ ಮತ್ತು ಕಾರ್ಯಗಳನ್ನು ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ.

**ವಿವರಣೆ**

19 ಮತ್ತು 20ನೇ ಶತಮಾನದಲ್ಲಿ ಕಾರ್ಮಿಕ ಶಕ್ತಿಯು ಜಾಗತಿಕ ಮಟ್ಟದಲ್ಲಿ ಸಂಚಲನವನ್ನುಂಟು ಮಾಡುವ ಮೂಲಕ ವಿವಿಧ ದೇಶಗಳಲ್ಲಿನ ಸರ್ಕಾರಗಳ ಗಮನ ಸೆಳೆದು ಹಲವಾರು ಬದಲಾವಣೆಗೆ ಕಾರಣವಾಗಿದೆ. ಕಾರ್ಲ್ ಮಾರ್ಕ್ಸ್, ಲೆನಿನ್ ರಂತಹ ಮೇಧಾವಿಗಳ ಪ್ರಭಾವಕ್ಕೊಳಗಾದ ಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ಜೀವನವನ್ನೇ ಮುಡಿಪಾಗಿಟ್ಟು ಹೋರಾಡಿದರು. ಇವೆಲ್ಲದರ ಪ್ರತಿಫಲವಾಗಿ ಬಂಡವಾಳಶಾಹಿ (ಮಾಲೀಕರು), ಕಾರ್ಮಿಕ ವರ್ಗ ಮತ್ತು ಸರ್ಕಾರಗಳನ್ನೊಳಗೊಂಡು ರಾಜೀ ಸೂತ್ರ ಏರ್ಪಡಿಸುವ ಜೊತೆಗೆ ಕೆಲವು ಮಹತ್ವದ ನಿರ್ಣಯಗಳನ್ನು ಕೈಗೊಂಡು ಕಾರ್ಮಿಕರ ಹಿತಾಸಕ್ತಿ ಕಾಪಾಡಲು ಐ.ಎಲ್.ಓ ಮುಂದಾಯಿತು. ಇದರ ಪ್ರಮುಖ ಉದ್ದೇಶಗಳೆಂದರೆ ಕೆಲಸಕ್ಕೆ ತಕ್ಕಂತೆ ವೇತನ, ಕೆಲಸದ ವೇಳೆಯ ನಿಯಂತ್ರಣ, ಕೆಲಸದ ಸ್ಥಳದಲ್ಲಿ ಅಗತ್ಯ ಸೌಲಭ್ಯ ದೊರಕುವಂತಿರಬೇಕು, ಕಾರ್ಮಿಕರ ಆರೋಗ್ಯ ಮತ್ತು ಅಪಘಾತಗಳಿಂದ ರಕ್ಷಿಸಿ ಸಾಮಾಜಿಕ ನ್ಯಾಯ ಒದಗಿಸುವುದು ಸಂಘದ ಪ್ರಮುಖ ಉದ್ದೇಶಗಳಾಗಿವೆ. ಇಂದಿಗೂ ಸಹ ಕಾರ್ಮಿಕರ ಸಂಖ್ಯೆ ಸಂಘಟಿತ ವಲಯಕ್ಕಿಂತ ಅಸಂಘಟಿತ ವಲಯದಲ್ಲೇ ಹೆಚ್ಚಿನ ಪ್ರಮಾಣದಲ್ಲಿದೆ. ವಿಶ್ವಬ್ಯಾಂಕ್ ಮತ್ತು ಅಂತರಾಷ್ಟ್ರೀಯ ಕಾರ್ಮಿಕ ಸಂಘದ ವರದಿ ಪ್ರಕಾರ ಭಾರತದಲ್ಲಿಯೂ ಸಹ 51.23 ಕೋಟಿಯಷ್ಟು ಬೃಹತ್ ಪ್ರಮಾಣದ ಕಾರ್ಮಿಕ ವರ್ಗವಿದೆ.

* ***ಸಹಾಯಕ ಪ್ರಾಧ್ಯಾಪಕರು, ಶ್ರೀ ಶಂಕರ ಪದವಿ ಮಹಾವಿದ್ಯಾಲಯ, ನವಲಗುಂದ, ಧಾರವಾಡ***

ಇತ್ತೀಚಿನ ಸರ್ಕಾರಗಳು ಕಾರ್ಮಿಕರ ಹಿತಕ್ಕಿಂತ ಮಾಲೀಕರ ಹಿತರಕ್ಷಣೆ ಮಾಡುವಂತಹ ನೀತಿ ನಿಯಮಗಳನ್ನು ರೂಪಿಸುವತ್ತ ಹೆಚ್ಚಿನ ಗಮನಹರಿಸುತ್ತಿವೆ. ಸರ್ಕಾರಿ ಯೋಜನೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ, ಆಶಾ ಕಾರ್ಯಕರ್ತೆಯರನ್ನೊಳಗೊಂಡಂತೆ ಇನ್ನೂ ಅನೇಕ ಕಾರ್ಮಿಕರು ರಾಜ್ಯ ಹಾಗೂ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಭಾಗವಾಗಿ ಸೂಕ್ತ ಸೌಲಭ್ಯಗಳಿಲ್ಲದೆ ಆತಂಕದಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಾಫ್ಟ್‌ವೇರ್ ವಲಯದಲ್ಲಿನ ಕಾರ್ಮಿಕರಿಗೆ ಅಧಿಕ ಅವಧಿಯ ಕಾರ್ಯಭಾರ ವಹಿಸಲಾಗುತ್ತಿದೆ. ಇತ್ತೀಚಿಗೆ ಅಮೇರಿಕದ ಅಧ್ಯಕ್ಷ ಟ್ರಂಪ್ ರೂಪಿಸಿರುವ ವಲಸೆ ನಿರ್ಬಂಧ ಕಾಯ್ದೆಯಿಂದ ಭಾರತ ಸೇರಿದಂತೆ ಹಲವಾರು ರಾಷ್ಟ್ರಗಳ ಕಾರ್ಮಿಕರಿಗೆ ತೊಂದರೆಯುಂಟಾಗಿದೆ. ಇಂತಹ ಧೋರಣೆಯು ಅಂತರಾಷ್ಟ್ರೀಯ ಕಾರ್ಮಿಕ ಸಂಘದ ಆಶಯದ ವಿರುದ್ಧವಾಗಿವೆ.

ಇತ್ತೀಚಿನ ದಿನಗಳಲ್ಲಿ ಭಾರತದ ಕೃಷಿ ರಂಗವು ಕೂಲಿ ಕಾರ್ಮಿಕರ ಸಮಸ್ಯೆ ಎದುರಿಸುತ್ತಿದೆ. ಕಾರಣ ಅಲ್ಪಕೂಲಿ, ಬರಗಾಲ ಹಾಗೂ ನಗರ ಪ್ರದೇಶಗಳಲ್ಲಿ ಹೆಚ್ಚಾಗುತ್ತಿರುವ ಕೈಗಾರಿಕಾ ಉದ್ಯೋಗದಿಂದಾಗಿ ನಗರ ಜೀವನ ಅನುಭವಿಸಲು ಗ್ರಾಮೀಣದಿಂದ ನಗರ ಪ್ರದೇಶಗಳತ್ತ ವಲಸೆ ಪ್ರಮಾಣ ಹೆಚ್ಚಾಗತೊಡಗಿದೆ. ಇಂತಹ ಅಧಿಕ ಕಾರ್ಮಿಕರ ಲಭ್ಯತೆಯಿಂದಾಗಿ ಕೈಗಾರಿಕಾ ಉದ್ಯಮಗಳಲ್ಲಿ ಸ್ಪರ್ಧಾತ್ಮಕತೆ ಏರ್ಪಟ್ಟು ಕಾರ್ಮಿಕರಿಗೆ ನಿರೀಕ್ಷಿತ ಮಟ್ಟದಲ್ಲಿ ಆದಾಯ ಮತ್ತು ಸೌಲಭ್ಯ ದೊರೆಯದಿರುವುದು ಶೋಚನೀಯ. ಗಾರ್ಮೆಂಟ್ಸ್‌ನಂತಹ ಅಧಿಕ ಶ್ರಮ ಬೇಡುವ ಉದ್ಯಮಗಳು ಹೆಚ್ಚಾಗಿ ಮಹಿಳಾ ಕಾರ್ಮಿಕರನ್ನು ಅವಲಂಬಿಸಿರುತ್ತವೆ. ಇಲ್ಲಿ ವಿಶ್ರಾಂತಿಗೆ ಅತ್ಯಲ್ಪ ಸಮಯ ನೀಡುವುದರೊಂದಿಗೆ ಅಧಿಕ ಪ್ರಮಾಣದಲ್ಲಿ ಕೆಲಸ ಪಡೆಯುವುದನ್ನು ಕಾಣಬಹುದು.

ಕೃಷಿ ಕ್ಷೇತ್ರವೂ ಅಧಿಕವಾಗಿ ಮಹಿಳಾ ಕಾರ್ಮಿಕರಿಂದಲೇ ಕೂಡಿದೆ. ಇದರೊಂದಿಗೆ ಜಾಗತೀಕರಣದ ಪ್ರಭಾವದಿಂದ ಆಧುನಿಕ ತಂತ್ರಜ್ಞಾನಗಳು ಭಾರತದ ಕೈಗಾರಿಕಾ ವಲಯದಲ್ಲಿ ತಮ್ಮ ಸ್ಥಾನ ಸೃಷ್ಟಿಸಿಕೊಳ್ಳುವುದರೊಂದಿಗೆ ಉದ್ಯೋಗ ನಷ್ಟಕ್ಕೆ ಕಾರಣವಾಗಿವೆ. ನಾಸ್ಕಾಮ್ ಎಂಬ ವ್ಯಾಪಾರಿ ಒಕ್ಕೂಟದ ವರದಿ ಪ್ರಕಾರ ಭಾರತದಲ್ಲಿ ಪ್ರತಿ ವರ್ಷ ಲಕ್ಷಾಂತರ ಉದ್ಯೋಗ ನಷ್ಟವು ತಂತ್ರಜ್ಞಾನದ ಪ್ರಭಾವದಿಂದ ಉಂಟಾಗುತ್ತಿದೆ. ಉದ್ಯಮಿಗಳೂ ಸಹ ಉನ್ನತ ತಂತ್ರಜ್ಞಾನಕ್ಕೆ ಮೊರೆಹೋಗುವುದು ಸ್ವಾಭಾವಿಕ. ಏಕೆಂದರೆ ಯಂತ್ರೋಪಕರಣಗಳು ವಿಶ್ರಾಂತಿ ಬೇಡುವುದಿಲ್ಲ, ಅಧಿಕ ಕೂಲಿ ಕೇಳುವುದಿಲ್ಲ, ಮುಷ್ಕರ ಮಾಡುವುದಿಲ್ಲ ಹಾಗೂ ಮನುಷ್ಯರಿಗೆ ಬೇಕಾಗುವ ಯಾವುದೇ ಅಗತ್ಯ ಸೌಲಭ್ಯಕ್ಕೆ ಬೇಡಿಕೆ ಇಡುವುದಿಲ್ಲ!.

ಸರ್ಕಾರಿ ಒಡೆತನದ ಉದ್ಯಮ ಮತ್ತು ಖಾಸಗಿ ಒಡೆತನದ ಉದ್ಯಮಗಳನ್ನು ತುಲನೆ ಮಾಡಿದಾಗ ಸಾಕಷ್ಟು ಅಜ–ಗಜಾಂತರವಾದ ವೇತನ ತಾರತಮ್ಯ ಕಂಡು ಬರುತ್ತದೆ. ಖಾಸಗಿ ವಲಯದ ಉದ್ಯಮಗಳಲ್ಲಿ ದುಡಿಯುವ ಕೈಗಳು ಸರ್ಕಾರಿ ಕ್ಷೇತ್ರಕ್ಕಿಂತ ಹಲವು ಪಟ್ಟು ಅಧಿಕ ಶ್ರಮಜೀವಿಗಳಾಗಿವೆ. ಆದರೆ ಅಂತಹ ಶ್ರಮಕ್ಕೆ ಸರಿಯಾದ ವೇತನವಾಗಲಿ, ಅಗತ್ಯ ಸೌಲಭ್ಯಗಳಾಗಲಿ ಅಥವಾ ನಿವೃತ್ತಿ ಬದುಕಿಗೆ ಬೇಕಾಗುವ ಆಸರೆಯಾಗಲಿ ಇರುವುದಿಲ್ಲ. ಕಾರ್ಮಿಕರ ಬದುಕು ವೃತ್ತಿ ಜೀವನದುದ್ದಕ್ಕೂ ಮತ್ತು ವೃತ್ತಿ ಜೀವನದ ನಂತರವೂ ನಿರಂತರ ಅಭದ್ರತೆಯ ಭಾವದೊಂದಿಗೆ ಸಮಸ್ಯೆಗಳ ಸುಳಿಯಲ್ಲಿ ಬದುಕುವಂತಾಗಿದೆ. ಸೂಕ್ಷ್ಮವಾಗಿ ಗಮನಿಸಿದರೆ ಬಹುಪಾಲು ಸಣ್ಣ ಕೈಗಾರಿಕೆಗಳಲ್ಲಿ ಕಾರ್ಮಿಕ ಕಾಯ್ದೆಯ ಅನುಷ್ಠಾನವೇ

ಇರುವುದಿಲ್ಲ. ಅಲ್ಲಿನ ಕಾರ್ಮಿಕರಿಗೆ ಇಂತಹ ಕಾಯ್ದೆಗಳ ಅರಿವೂ ಸಹ ಇಲ್ಲದಷ್ಟು ಮುಗ್ದರಾಗಿರುತ್ತಾರೆ. ಉದ್ಯಮಿಗಳಲ್ಲಿಯೂ ಹಲವರಿಗೆ ಕಾಯ್ದೆಯ ಸ್ವರೂಪ, ಉದ್ದೇಶ ಮತ್ತು ಅದರ ಪರಿಣಾಮ ತಿಳಿಯದಿರುವುದು ಸೋಜಿಗವೆನಿಸುತ್ತದೆ.

**ಉಪಸಂಹಾರ**

ಈ ನಿಟ್ಟಿನಲ್ಲಿ ಕಾರ್ಮಿಕ ಕಾಯ್ದೆಯು ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಬಲವರ್ಧನೆಗೊಳ್ಳಬೇಕು. ಇಂತಹ ಕಾಯ್ದೆಗಳ ಕುರಿತು ಜಾಗೃತಿ ಮೂಡಿಸಲು ಸರ್ಕಾರದ ಸಹಭಾಗಿತ್ವದಲ್ಲಿ ತಂಡಗಳನ್ನು ರಚಿಸಬೇಕು. ಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ಪ್ರತಿಭಟಿಸುವಂತಹ ಜ್ಞಾನ ಮತ್ತು ತಿಳುವಳಿಕೆಯೊಂದಿಗೆ ಅಗತ್ಯ ವಾತಾವರಣವನ್ನೂ ನಿರ್ಮಿಸಬೇಕಾಗಿದೆ. ಕೈಗಾರಿಕೆಗಳಿಗೆ ಅನುಕೂಲಕರವಾಗುವ ಮತ್ತು ಅತ್ಯವಶ್ಯಕವಾದ ತರಬೇತಿಯನ್ನು ನೀಡಲು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಪ್ರಾಯೋಜಕತ್ವದಲ್ಲಿ ತರಬೇತಿ ಕೇಂದ್ರಗಳನ್ನು ಪ್ರತಿ ತಾಲೂಕಿಗೊಂದರಂತೆ ತೆರೆಯಬೇಕು. ಕನಿಷ್ಠ ಕೂಲಿ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವ ಜೊತೆಗೆ ನಿವೃತ್ತಿ ನಂತರದ ಜೀವನೋಪಾಯಕ್ಕೂ ಸೌಲಭ್ಯ ಕಲ್ಪಿಸಿದರೆ ಎಲ್ಲರೊಂದಿಗೆ ಎಲ್ಲರ ಅಭಿವೃದ್ದಿಗೆ ಭಾಷ್ಯ ಬರೆಯಬಹುದು ಎಂಬ ಆಶಯ.

**ಪರಾಮರ್ಶನ ಗ್ರಂಥಗಳು**


- ಜೈನ್. ಎಂ., (2019). ಎ ಕ್ರಿಟಿಕಲ್ ಅನಾಲಿಸಿಸ್ ಆಫ್ ಟ್ರೆಂಡ್ಸ್ ಇನ್ ಜೆಂಡರ್ ವೇಜ್ ಗ್ಯಾಪ್: ಎ ಕೇಸ್ ಸ್ಟಡಿ ಆಫ್ ಇಂಡಿಯಾ (2010–2018). ಇಂಟರ್‌ನ್ಯಾಷನಲ್ ಜರ್ನಲ್ ಆಫ್ ರಿಸರ್ಚ ಇನ್ ಸೋಶಿಯಲ್ ಸೈನ್ಸಸ್, 9 (6), 395–410.
- ಜೆನ್ನಿ ಮಾಹಿಜ್ ಎಲ್., ಭಾನುಲತ ಕೆ. (2020). ಎ ಜೆನರಲ್ ಸ್ಟಡಿ ಆನ್ ಚಾಲೆಂಜಸ್ ಆಫ್ ಅನ್‌ಆರ್‌ಗನೈಸ್ಡ್ ಸೆಕ್ಟರ್. ಇಂಟರ್‌ನ್ಯಾಷನಲ್ ಜರ್ನಲ್ ಆಫ್ ಎಜುಕೇಷನಲ್ ಸೈನ್ಸ್ ಅಂಡ್ ರಿಸರ್ಚ್. 10(1), 21–28.
- ಮಿಷೆಲ್ ಡಿ ಹಾಸ್. (2020). ಜನರಲ್ ಲೇಬರ್ ಹಿಸ್ಟರಿ ಆಫ್ ಆಫ್ರಿಕಾ: ವರ್ಕರ್ಸ್, ಎಂಪ್ಲಾಯರ್ಸ್ ಅಂಡ್ ಗೌರ್ನಮೆಂಟ್, 20 ಮತ್ತು 21 ಸೆಂಚುರೀಸ್. ಎಕಾನಾಮಿಕ್ ಹಿಸ್ಟರಿ ರಿವಿವ್ಯ 73(2).
- ಪೋನ್ಸ–ವಿಗ್ನಾನ್. ಎನ್., ಅನ್ವರ. ಎಮ್., ರಾಣಿ. ಯು. (2019). ಫಾರ್ ಎ ಫ್ಯೂಚರ್ ಆಫ್ ವರ್ಕ್ ವಿಥ್ ಡಿಗ್ನಿಟಿ: ಎ ಕ್ರಿಟಿಕ್ ಆಫ್ ದಿ ವರ್ಲ್ಡ್ ಬ್ಯಾಂಕ್ ಡೆವಲಪ್ಮೆಂಟ್ ರಿಪೋರ್ಟ್, ಚೇಂಜಿಂಗ್ ನೇಚರ್ ಆಫ್ ವರ್ಕ್. ಗ್ಲೋಬಲ್ ಲೇಬರ ಜರ್ನಲ್, 10(1).